



ಅರುಣಾಚಲ ಪ್ರದೇಶದ ಬುದ್ಧಪ್ರಜ್ಞೆಯ ಕೇಂದ್ರದಂತೆ ಕಾಣಿಸುವ, ನಂದನದ ತುಣುಕಿನಂತಹ ತವಾಂಗ್



ದಾರಿಯಲ್ಲಿ ಕಂಡ ಒಂದು ಜಲಪಾತ

ಅಸ್ಸಾಮಿನಲ್ಲಿ ಬಿಹು ಹಬ್ಬ ಶುರುವಾಗಿತ್ತು. ಬಿಹು ವರ್ಷದ ಆರಂಭವನ್ನು ಸೂಚಿಸುವ ಹಬ್ಬ. ಅತ್ಯಂತ ಸಂಭ್ರಮದಿಂದ ಅಸ್ಸಾಮಿಯರು ಒಂದು ತಿಂಗಳ ಕಾಲ ಬಿಹುವನ್ನು ಆಚರಿಸುತ್ತಾರೆ. ರಾತ್ರಿ ನಮ್ಮನ್ನು ಬಿಹು ಆಚರಣೆಯ ಪೆಂಡಾಲಿಗೆ ಕರೆದೊಯ್ದರು. ಸೆಕೆ ಕುಲ್ಲುತ್ತಿತ್ತು. ವಿಶೇಷ ಸೀರೆಗಳನ್ನು ಉಟ್ಟ ಸುಂದರವಾದ ಅಸ್ಸಾಮಿ ಹೆಣ್ಣುಮಕ್ಕಳು ಸಾಲಾಗಿ ಸೊಂಟ ಕುಣಿಸುತ್ತ ಬಿಹು ನೃತ್ಯ ಆರಂಭಿಸಿದಾಕ್ಷಣ, ಎಲ್ಲ ಸ್ತಬ್ಧವಾಗಿ ಆ ನೃತ್ಯದಲ್ಲಿ ಮುಳುಗಿಹೋದರು. ಗಂಡುಮಕ್ಕಳೂ ನೃತ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಹೆಣ್ಣುಮಕ್ಕಳ ಬಳುಕಿನ ಮುಂದೆ ಸಪ್ಪೆಯಾಗುತ್ತಾರೆ. ಆ ನೃತ್ಯವೇ ಹಾಗೆ. ನೋಡುವವರ ಮನಸ್ಸಿನೊಳಗೆ ಒಂದು ರೀತಿಯ ಮಳಮಳ ಶುರುವಾಗುತ್ತದೆ. ತಮಗೇ ಗೊತ್ತಿಲ್ಲದೆ ನೋಡುಗರ ಹೃದಯದ ಬಡಿತ ಆ ಲಯದೊಳಗೆ ಐಕ್ಯವಾಗುತ್ತದೆ. ಆ ಬೆಟ್ಟಸಾಲಿನ, ದುಡಿಮೆಯ ಶ್ರಮಜೀವಿಗಳ ನೃತ್ಯ ಅವರ ಬದುಕಿನ ಭಾಗ. ಬಿಹು ನಾನು ತುಂಬಾ ಇಷ್ಟಪಡುವ ನೃತ್ಯ. ಅಸ್ಸಾಮಿನಲ್ಲಿ ಬಿಹು ನೃತ್ಯ ಮಾಡದ ಹೆಣ್ಣುಮಕ್ಕಳೇ ಇಲ್ಲ. ನಮ್ಮ ರಾಜ್ಯದ ರಸ್ತೆಗಳಲ್ಲಿ ಗಣಪತಿ ಇಡಲು ಕಾಸು ವಸೂಲು ಮಾಡುವ ಹಾಗೆ ಅಲ್ಲಿಯ ಹಳ್ಳಿ ರಸ್ತೆಗಳಲ್ಲಿ ಹೆಣ್ಣುಮಕ್ಕಳು ವಾಹನ ನಿಲ್ಲಿಸಿ ಬಿಹು ಹಬ್ಬಕ್ಕೆ ದುಡ್ಡು ಕೇಳುತ್ತಾರೆ. ಸುಮ್ಮನೆ ಕೇಳುವುದಿಲ್ಲ, ಒಂದೆರಡು ಬಿಹು ನೃತ್ಯದ ಹೆಜ್ಜೆ ಹಾಕಿ ಕೇಳುತ್ತಾರೆ. ಇಲ್ಲವೆನ್ನಲು ಯಾರಿಗೂ ಮನಸ್ಸು ಬರುವುದಿಲ್ಲ!



ಭೂತಾನ್ ಗಡಿಯಲ್ಲಿ ಹೋಟೆಲ್ ನಡೆಸುತ್ತಿರುವ ಮಹಿಳೆ

ಬಿಹುವಿನ ಜೊತೆಗೇ ಬೆಸೆದುಕೊಂಡಿರುವ ಅಸ್ಸಾಮಿ ಜನಪದ ಹಾಡುಗಳದ್ದು ಮತ್ತೊಂದು ಲೋಕ. 'ದಿಲ್ ಹೂಂ ಹೂಂ ಕರೇ', 'ಗಂಗಾ ಕ್ಯೂಂ ಬೆಹತಿ ಹೈ', 'ಏಕ್ ಗಲಿ ದೋ ಪತ್ತಿಯಾ' ಹಾಡಿನಂತಹ ನೂರಾರು ಜನಪದ ಹಾಡುಗಳ ನದಿಯಂತಿದ್ದ ಭೂಪೇನ್ ಹಜಾರಿಕಾ ಅವರಿಗೆ ಗುವಾಹಟಿಯಲ್ಲಿ ಸುಂದರವಾದ ಸ್ಮಾರಕವೊಂದನ್ನು ನಿರ್ಮಿಸಿದ್ದಾರೆ.

ಮಾರನೆಯ ದಿನ ನಮ್ಮ ಪ್ರಯಾಣ ತವಾಂಗ್ ಕಡೆಗೆ. ಮೊದಲಿಗೆ ಪೊಬಿತೋರಾ ವೈಲ್ಡ್ ಲೈಫ್ ಅರಣ್ಯಧಾಮಕ್ಕೆ ಭೇಟಿ. ಅಸ್ಸಾಮಿನ ಎರಡು ಅರಣ್ಯಧಾಮಗಳೆಂದರೆ ಒಂದು ಕಾಜಿರಂಗ, ಇನ್ನೊಂದು ಪೊಬಿತೋರಾ. ಎರಡೂ ಅರಣ್ಯಧಾಮಗಳು ಘೇಂಡಾಮೃಗಗಳ ಆವಾಸಸ್ಥಾನ. ಪೊಬಿತೋರಾ ಅರಣ್ಯಧಾಮದಲ್ಲಿ ಆನೆಗಳ ಮೇಲೆ ನಮ್ಮನ್ನು ಕೂರಿಸಿಕೊಂಡು